# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 130(135) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ದಿನೇಶ್ ಗೂಳಿಗೌಡ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 19.12.2022 |

| ಕ್ರಮ. ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ವಿಶ್ವವಿದ್ಯಾಲಯವನ್ನು ಯಾವಾಗ ಪ್ರಾರಂಭಿಸಲಾಯಿತು; | ಮಂಡ್ಯ ವಿಶ್ವವಿದ್ಯಾಲಯವನ್ನು ಜೂನ್ 2019 ರಿಂದ ಪ್ರಾರಂಭಿಸಲಾಯಿತು. |
| ಆ) | ಈ ವಿಶ್ವವಿದ್ಯಾಲಯ ಪ್ರಾರಂಭವಾದಾಗಿನಿಂದ ಇದುವರೆವಿಗೂ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು; | ಮಂಡ್ಯ ವಿಶ್ವವಿದ್ಯಾಲಯಕ್ಕೆ 2022-23ನೇ ಸಾಲಿಗೆ ರೂ. 100 ಲಕ್ಷಗಳ ಅನುದಾನ ಹಂಚಿಕೆಯಾಗಿರುತ್ತದೆ. ಸದರಿ ಅನುದಾನದಲ್ಲಿ ಇದುವರೆವಿಗೂ ಮೂರು ತ್ರೈಮಾಸಿಕ ಕಂತುಗಳಲ್ಲಿ ರೂ. 75.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. |
| ಇ) | ಬಿಡುಗಡೆಯಾಗಿರುವ ಅನುದಾನದಲ್ಲಿ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಹಾಗೂ ಇದಕ್ಕೆ ವೆಚ್ಚವಾಗಿರುವ ಮೊತ್ತವೆಷ್ಟು; (ವಿವರಗಳನ್ನು ನೀಡುವುದು) | ಮಂಡ್ಯ ವಿಶ್ವವಿದ್ಯಾಲಯಕ್ಕೆ ಹಂಚಿಕೆಯಾಗಿರುವ ಅನುದಾನದಲ್ಲಿ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ನಿಗಧಿ ಪಡಿಸಲಾಗಿದ್ದು, ಇದುವರೆವಿಗೂ ಯಾವುದೇ ವೆಚ್ಚ ವಾಗಿರುವುದಿಲ್ಲ. |

| ಕ್ರ. ಸಂ. | ವಿವರಗಳು | ಅಂದಾಜು ಮೊತ್ತು ರೂ. ಲಕ್ಷಗಳಲ್ಲಿ |
|---|---|---|
| 1 | ವೈಜ್ಞಾನಿಕ ಉಪಕರಣಗಳು | 20 |
| 2 | ಪೀಠೋಪಕರಣಗಳು | 15 |
| 3 | ಗ್ರಂಥಾಲಯ ಪುಸ್ತಕಗಳು | 05 |
| 4 | ಗಣಕ ಯಂತ್ರಗಳು, ಪ್ರಿಂಟರ್‌ಗಳು ಮತ್ತು ಜೆರಾಕ್ಸ್ ಮಷಿನ್‌ಗಳು | 20 |
| 5 | ಕುಡಿಯುವ ನೀರಿನ ಘಟಕಗಳು | 05 |
| 6 | ಮೂಲಭೂತ ಸೌಕರ್ಯಗಳ ನಿರ್ವಹಣೆಗಾಗಿ | 10 |



Generated from eOffice by SNEHAL SUDHAKAR LOKHANDE, ED-DS-UNI(SSL), DEPUTY SECRETARY, EDUCATION HIGHER SEC on 17/12/2022 11:44 AM

| | | |
|---|---|---|
| 7 | ಹೊಸ ಆಡಳಿತ ಭವನದ ಆಂತರಿಕ ಕೆಲಸ ಕಾರ್ಯಗಳಿಗೆ | 15 |
| 8 | ಸಿ.ಸಿ. ಕ್ಯಾಮರಾ ಅಳವಡಿಕೆಗೆ | 10 |
| | ಒಟ್ಟು- | ರೂ.100-00 |

| | | |
|---|---|---|
| ಈ) | ಮಂಡ್ಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಸಂಖ್ಯೆ ಎಷ್ಟು? (ವಿವರಗಳನ್ನು ನೀಡುವುದು) | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ, 2022ರ ಪ್ರಾರಂಭಕ್ಕೆ ಮೊದಲು ಮಂಡ್ಯ ಜಿಲ್ಲೆಯಲ್ಲಿರುವ ಕಾಲೇಜುಗಳು ಅಥವಾ ಶೈಕ್ಷಣಿಕ ಸಂಸ್ಥೆಗಳು ಮೈಸೂರು ವಿಶ್ವವಿದ್ಯಾಲಯದಿಂದ ಹಿಂತೆಗೆದುಕೊಂಡು ಹಾಗೂ ಮೈಸೂರು ವಿಶ್ವವಿದ್ಯಾಲಯದ ವಿಶೇಷಾಧಿಕಾರಗಳಿಗೆ ಈ ಹಿಂದೆ ಪ್ರವೇಶ ಪಡೆದುಕೊಂಡಿದ್ದ ಅಥವಾ ಸಂಯೋಜಿತವಾಗಿದ್ದ ಎಲ್ಲಾ ಅಂಥ ಕಾಲೇಜುಗಳು ಅಥವಾ ಶೈಕ್ಷಣಿಕ ಸಂಸ್ಥೆಗಳು ಮಂಡ್ಯ ವಿಶ್ವವಿದ್ಯಾಲಯದ ವಿಶೇಷಾಧಿಕಾರಗಳಿಗೆ ನಿರ್ದಿಷ್ಟಪಡಿಸಬಹುದಾದಂತ ದಿನಾಂಕದಿಂದ ಜಾರಿಗೆ ಬರುವಂತೆ ಪ್ರವೇಶ ಪಡೆದುಕೊಳ್ಳುತ್ತವೆ. ಮಂಡ್ಯ ವಿಶ್ವವಿದ್ಯಾಲಯದಲ್ಲಿ ಒಟ್ಟು ಸಂಯೋಜಿತ ಕಾಲೇಜುಗಳ ಸಂಖ್ಯೆ 47 ಆಗಿರುತ್ತದೆ. |

**ಸಂಖ್ಯೆ: ಇಡಿ/427/ಯುಆರ್‌ಸಿ /2022**

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐಟಿ-ಬಿಟಿ ಮತ್ತು
ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲಾಭಿವೃದ್ಧಿ, ಜೀವನೋಪಾಯ ಹಾಗೂ
ಉದ್ಯಮಶೀಲತೆ ಇಲಾಖೆ ಸಚಿವರು.



Generated from eOffice by SNEHAL SUDHAKAR LOKHANDE ED-DS-UNI(SSL), DEPUTY SECRETARY, EDUCATION HIGHER SEC on 13/12/2022 11:44 AM